ನಿಸ್ಸಾರ, ನೀರಸ ಎಂಬ ಸ್ವಯಂ ಅರಿವಿಲ್ಲ. ಇವರ ಆತ್ಮರತಿಯ ತೆವಲಿಗೆ ಮಿತಿಯಿಲ್ಲ. ಅಸೂಕ್ಷ್ಮತೆಯ ಅಧ್ವಾನಗಳಿಗಂತೂ ಲೆಕ್ಕವೇ ಇಲ್ಲ. ದ್ರೌಪದಿಗೆ ಅಕ್ಷಯಾಂಬರ ನೀಡಿ ಮಾನ ಕಾಪಾಡಿದ ಶ್ರೀಕೃಷ್ಣನೇ ಬಡಪಾಯಿ ರಸಿಕ ಶ್ರೋತೃಗಳಿಗೆ ಹತ್ತಿಯುಂಡೆಗಳನ್ನು ಎಸೆದು ಇವರಿಂದ ಕಾಪಾಡಬೇಕಷ್ಟೇ!

ಈ ಮಾದರಿಯ ನಿರೂಪಕರಲ್ಲೂ ಹಲವು ಪ್ರಬೇಧಗಳಿರುವುದನ್ನು ನೀವು ಗಮನಿಸಿರಬಹುದು. ನಿರೂಪಕರು ಹೇಳಿದ್ದನ್ನು ಮತ್ತೊಮ್ಮೆ ವಿವರಿಸಿ ತಮ್ಮ ಬಾಯ್ಚಪಲ ತೀರಿಸಿಕೊಳ್ಳುವ ಪುನರಾವೃತ್ತಿ ಪ್ರಭೃತಿಗಳು. ತಾವು ಬರೆದುಕೊಂಡು ತಂದಿರುವ ಕೊಟೇಶನ್‌ಗಳನ್ನು ಸಂಬಂಧಸೂತ್ರವಿರದಲ್ಲೂ ಸೇರಿಸಿ ಹೇಳುವ ಕೋಟೇಶ್ವರರಾವ್‌ಗಳು. ಗಣ್ಯ ಬದಲಿಗೆ ಮಹಾತ್ಮವನ್ನೂ, ಪುಣ್ಯ ಬದಲಿಗೆ ಮೋಕ್ಷವನ್ನೂ ಬಳಸುವ ಅತಿ ಆಲಂಕಾರಿಕ ಪದಗಳ ಶಬ್ದಾಡಂಬರ ವ್ಯಾಮೋಹಿಗಳು. ಮೈಕನ್ನು ತಿನ್ನುವವರಂತೆ ಬಾಯೊಳಗಿಟ್ಟುಕೊಳ್ಳುವ ಮುರಳೀಲೋಲರು. ಹೊಲದಲ್ಲಿ ಬಿದ್ದ ತುಡುಗುದನಗಳನ್ನು ಓಡಿಸುವವರಂತೆ ಪ್ರತಿ ಮಾತಿಗೂ ಹೋ ಎಂದು ಅರಚುವ ಕರ್ಕಶ ಕಂಠದಾನ ಕಲಾವಿದರು. ಸ್ಟ್ಯಾಂಡಿಗಿರುವ ಮೈಕನ್ನು ಕಿತ್ತುಕೊಂಡು ಅಥವಾ ಕಾರ್ಡ್‌ಲೈಸ್ ಮೈಕನ್ನು ಕಾಡಿ ಬೇಡಿ ಪಡೆದುಕೊಂಡು ವೇದಿಕೆಯುದ್ದಕ್ಕೂ ನಡೆದಾಡುತ್ತಾ, ನುಲಿಯುತ್ತಾ ನಿರೂಪಿಸುವ ನಟರಾಜರು. ಮದುವೆಗೆ ಬಂದವರಂತೆ ಸಾಲಂಕೃತರಾಗಿ ಬಂದು ಗಳಿಗೆಗೊಮ್ಮೆ ಸೆರಗನ್ನೋ, ಕುರುಳನ್ನೋ ಸಂತೈಸುತ್ತ ಸಾಭಿನಯವಾಗಿ, ರಾಗವಾಗಿ ನಿರೂಪಿಸುವ ನಿತ್ಯಷೋಡಶಿ ಭ್ರಮಾವಿಷ್ಟರು. ಸಮಾರೋಪ ಇಲ್ಲವೆ ಮಧ್ಯದ ಗೋಷ್ಠಿಗಳ ಬದಲಿಗೆ ಉದ್ಘಾಟನಾ ಸಮಾರಂಭದ ನಿರೂಪಣೆಯ ಮೇಲೇ ಕಣ್ಣಿಟ್ಟು, ಅದು ಏನೇನೋ ಇಂದ್ರಜಾಲ ಮಹೇಂದ್ರಜಾಲ ಮಾಡಿ ಅದನ್ನು ಹೊಡಕೊಳ್ಳುವ ಉದ್ಘಾಟನಾ ಕಾರ್ಯಕ್ರಮ ನಿರೂಪಣಾ ಸ್ಪೆಷಲಿಸ್ಟ್‌ಗಳು. ಕಡ್ಡಿಪೆಟ್ಟಿಗೆಯನ್ನು ಜೇಬಲ್ಲಿ ಬಚ್ಚಿಟ್ಟುಕೊಂಡು ಉದ್ಘಾಟನೆಯ ದೀಪ ಬೆಳಗುವ ಕಾಲಕ್ಕೆ ಅದನ್ನು ಕೊಡುವ ನೆಪದಲ್ಲಿ ಓಡಿಹೋಗಿ ಫೋಟೊಕ್ಕೆ ಫೋಸ್ ಕೊಟ್ಟು ತಮ್ಮ ಇಷ್ಟಾರ್ಥ ಸಿದ್ಧಿಸಿಕೊಳ್ಳುವ ಕಡ್ಡಿಪೆಟ್ಟಿಗೆ ಚತುರರು. ಹೇಗೆ ಕತ್ತರಿಸಿದರೂ ಗಣ್ಯರೇ ಫೋಟೊ ಫ್ರೇಮಿನಿಂದ ಹೊರಗುಳಿಯಬೇಕಾಗಲಿ ತಾವು ಮಾತ್ರ ಹೇಗೆ ಆಯಕಟ್ಟಿನ ಸ್ಥಳದಲ್ಲಿ ನುಸುಳಿಕೊಂಡಿರಬೇಕೆಂದು ತಿಳಿದಿರುವ ಪ್ರಚಾರಪ್ರಿಯ ಪ್ರವೀಣರು. ಏನಪಾಂತಂದ್ರೆ, ಅನ್ನುವಂಥ, ಈ ಒಂದು, ಹಾಗಾಗಿ, ಬಹುಶಃ, ಯಾಕೆಂತಂದ್ರೆ, ಈ ಸಂದರ್ಭದಲ್ಲಿ, ಬಹುದು, ಇಷ್ಟಪಡ್ತೇನೆ ಎಂಬಂಥ ನಿರ್ದಿಷ್ಟ ಪದಗಳನ್ನು ಮೇಲಿಂದ ಮೇಲೆ ಬಳಸುವ ನಿರ್ದಿಷ್ಟ ದಾಳಿ ನಿಪುಣರು! ನಿಜವಾಗಿ ಹೇಳ್ತೇನೆ ಸಮಯ ಅಂತ ಬಹಳ ಇದ್ದರೆ, ವಾಕರಿಕೆ ತಡಕೊಳ್ಳುವ ಶಕ್ತಿ ಇದ್ದು ಸಹನೆ ಎಂಬುದು ಹೆಚ್ಚಿಗೆ ಇದ್ದರೆ, ನಿವೃತ್ತರಾದ ಮೇಲೆ ನಿರೂಪಣೆಯನ್ನು ಕೇಳುತ್ತ ಅಲ್ಲ, ನೋಡುತ್ತ ಕಾಲ ಕಳೆದುಬಿಡಬಹುದು. ಅಷ್ಟೊಂದು ವಿಚಿತ್ರವಿಚಿತ್ರ ನಮೂನೆಗಳಿವೆ ಅಲ್ಲಿ!

ನನ್ನನ್ನೊಮ್ಮೆ ನಾನು ಓದಿದ ಶಾಲೆಗೆ ಮುಖ್ಯ ಭಾಷಣಕಾರನಾಗಿ ಕರೆದಿದ್ದರು. ಆ ಶಾಲೆಯ ಗಣಿತ ಶಿಕ್ಷಕರು ನಿರೂಪಣೆಗಾಗಿ ನನಗಿಂತ ಹೆಚ್ಚು ತಯಾರಿ ಮಾಡಿಕೊಂಡಿದ್ದರ ಬಗ್ಗೆ ಗುಪ್ತಚರ ಮಾಹಿತಿಯನ್ನು ಪಡೆದುಕೊಳ್ಳದ ನಾನು, ಯಥಾರ್ಥನಂತೆ ಹಳೆಶಾಲೆಯ ಅಭಿಮಾನದಲ್ಲಿ ಭಾವುಕನಾಗಿ ಸಾಕಷ್ಟು ತಯಾರಿ ಮಾಡಿಕೊಂಡು ಹೋಗಿದ್ದೆ. ಆತ ನಿರೂಪಣೆಯ ಪ್ರತಿ ಅನೌನ್ಸ್‌ಮೆಂಟಿನ ಜೊತೆಗೆ ತಮಗೆ ಗೊತ್ತಿದ್ದ ದೃಷ್ಟಾಂತ, ಜೀವನಪ್ರಸಂಗ, ಪುರಾಣ, ಸ್ವಾನುಭವ ಪ್ರಸಂಗಗಳನ್ನು ವಿವರಿಸಿ; ಮುಖ್ಯೋಪಾಧ್ಯಾಯರ ಪ್ರಶಂಸೆ, ಸಹೋದ್ಯೋಗಿ ಶತ್ರುಗಳ ಗುಪ್ತ ತೆಗಳಿಕೆ, ವಿದ್ಯಾರ್ಥಿಗಳಿಗೆ ಹಿತೋಪದೇಶ ಇತ್ಯಾದಿಗಳನ್ನೆಲ್ಲ ಹೇಳಿ ಅಕ್ಷರಶಃ ಸಭೆಯನ್ನು ನಿದ್ರಾಸನ್ನದ್ಧ ಸ್ಥಿತಿಗೆ ತಂದು ನಿಲ್ಲಿಸಿದರು. ಕೊನೆಗೆ ನನ್ನ ಭಾಷಣ! ಪುನಃ ಅದನ್ನು ಅನೌನ್ಸ್ ಮಾಡಲೆಂದು ಬಂದವರು ನನ್ನ ಪ್ರಿಂಟೆಡ್ ಪರಿಚಯವನ್ನು ಟಿಶ್ಯೂ ಪೇಪರಿನಂತೆ ನಿರ್ದಾಕ್ಷಿಣ್ಯವಾಗಿ